ಬರೆದಿದ್ದನ್ನ ಮತ್ತೊಬ್ರು ಓದ್ತಾರೆ ಅಂತ ನಿಂಗೆ ನಂಬಿಕೆ ಉಂಟಾ? ಕೆಲಸಕ್ಕೆ ಬರದ ವಿಚಾರಕ್ಕೆ ಯಾಕೆ ತಲೆ ಹಾಳು ಮಾಡ್ಕೋಬೇಕು?"

"ನನ್ನ ತಲೆ ಹಾಳು ಮಾಡ್ಕೊಂಡ್ರೆ ನಿಂಗೇನು ಕಷ್ಟ?"

"ಆಯ್ತು, ನೋಟ್ ಪುಸ್ತಕ ತಂದ್ಕೊಡ್ತೀನಿ. ಅದೇನು ಬರೀತೀಯೋ ಬರ್ಕೋತಿರು. ಆದ್ರೆ ಅದೇ ನೆಪ ಮಾಡ್ಕೊಂಡು ಯಾರ್‍ಯಾರ ಜೊತೇನೋ ಸಲಿಗೆ ಬೆಳೆಸ್ಕೊಂಡ್ರೆ ಇಷ್ಟ ಆಗಲ್ಲ ನಂಗೆ..."

ಮತ್ತದೇ ಮಾತು. ನನ್ನ ಹವ್ಯಾಸ ಇವನ ಕಣ್ಣಲ್ಲಿ ಕೈಂಯಿ. ಸಾಹಿತ್ಯದ ಗಂಧಗಾಳಿ ಇಲ್ಲದವನನ್ನು ಮೆಚ್ಚಿ ಮದುವೆಯಾಗಿದ್ದು ನನ್ನ ದಡ್ಡತನ. ಮೊದಲೇ ಕೂತು ಇಂತಾ ವಿಚಾರಗಳನ್ನು ಮಾತಾಡಬೇಕಿತ್ತು. ಅಥವಾ ಯಾರಿಗೆ ಗೊತ್ತು, ಮದುವೆಯಾದ ಮೇಲೆ ಬಣ್ಣ ಬದಲಿಸುತ್ತಿರಲಿಲ್ಲ ಎಂದು ಹೇಗೆ ನಂಬುವುದು? 'ಪ್ರೀತಿ ಜಾಸ್ತಿ ಇದ್ದಷ್ಟೂ ಮತ್ಸರ ಹೆಚ್ಚು' ಅನ್ನುವುದು ಇಂತಾ ವಿಷಯಗಳಲ್ಲಿ ಸುಳ್ಳೇ. ಇದು ಬೇರೆಯದೇ ನಮೂನಿ. ಗುಮಾನಿ. ಹೆಂಡತಿ ತನಗಿಂತಾ ಯಾವ ರೀತಿಯಲ್ಲೂ ಗುರ್ತಿಸಿಕೊಳ್ಳುವಂತಾಗಬಾರದು ಎನ್ನುವ ಸ್ವಾರ್ಥ. ಅವಳು ತನಗಷ್ಟೇ, ಮನೆಗಷ್ಟೇ, ಸಂಸಾರಕ್ಕಷ್ಟೇ ಸೀಮಿತವಾಗಿರಬೇಕು ಎನ್ನುವ ಸಣ್ಣತನ...

ಬರವಣಿಗೆಯಿಲ್ಲದ ಬದುಕನ್ನು ಊಹಿಸಿಕೊಳ್ಳಲೊಲ್ಲದ ರೋಹಿಣಿ ಪುರುಸೊತ್ತು ಸಿಕ್ಕಾಗ ಏಕಾಂತದಲ್ಲಿ ಬರೆಯುವುದನ್ನು ಬಿಡಲಿಲ್ಲ. ಆದರೆ, ಅದ್ಯಾವ ಮಾಯದಲ್ಲೋ ಬರೆದಿಟ್ಟ ಪುಸ್ತಕ ಕಣ್ಮರೆಯಾಗುತ್ತಿತ್ತು. 'ಎಲ್ಲಿ ಹೋಯ್ತು?' ಎಂದು ಕೇಳಿದರೆ 'ನಂಗೇನೇ ಗೊತ್ತು?' ಎನ್ನುವ ಉತ್ತರ. ಆಯ್ತು, ಕದ್ದು ಮುಚ್ಚಿ ಬರೆದಿದ್ದನ್ನು ಪೋಸ್ಟಿಗೆ ಕಳಿಸಬೇಕಾದರೂ ಹಿಡಿಯಬೇಕು ಗಂಡನ ಕಾಲು. ಸ್ಟ್ಯಾಂಪು ಹಚ್ಚಿ ಪೋಸ್ಟ್ ಮಾಡಿ ಬರುವೆನೆಂದು ಸ್ವತಹಾ ಹೋಗಲು ಹತ್ತಿರದಲ್ಲಿತ್ತೇ ಪೋಸ್ಟಾಫೀಸು? ಗಂಡನ ಕೈಯಲ್ಲಿ ಈ ಕೆಲಸ ವಹಿಸುವುದು ಸಾಧ್ಯವೇ ಇಲ್ಲ. ಒಂದೊಮ್ಮೆ ವಹಿಸಿದರೂ ಕೈಗೆ ಕೊಟ್ಟಿದ್ದನ್ನು ಅವನು ಪೋಸ್ಟ್ ಮಾಡುತ್ತಾನೆಂಬ ನಂಬಿಕೆಯಿಲ್ಲ. ಹರಿದು ಬಿಸಾಕಿದರೆ ಯಾರಿಗೆ ಗೊತ್ತಾಗುತ್ತದೆ? ಇಕ್ಕಳದಲ್ಲಿ ಸಿಕ್ಕಿಕೊಂಡಂತೆ ವಿಲಿವಿಲಿಗುಟ್ಟುತ್ತಿದ್ದಳು ರೋಹಿಣಿ. ಆವತ್ತು, ಅವನನ್ನು ಮೊದಲು ನೋಡಿದ ಆ ದಿನ, ಅವನು ಸಮ್ಮೇಳನದಲ್ಲಿ ಸ್ವಯಂಸೇವಕನಂತೆ ಭಾಗವಹಿಸಿದ್ದಕ್ಕೆ ಒಂದು ಸಕಾರಣ ಇತ್ತಂತೆ. ಚಂದ್ರುವೇ ಬಾಯ್ಬಿಟ್ಟು ಹೇಳಿದ್ದ. ಸುತ್ತಮುತ್ತಲ ಹಳ್ಳಿಯ ಜನ ಕಾರ್ಯಕ್ರಮಕ್ಕೆ ಕೈಲಾದ ಚಂದಾ ಕೊಟ್ಟಿದ್ದರು. ಒಂದು ಹಬ್ಬಕ್ಕೆ, ಜಾತ್ರೆಗೆ ಸೇರುವಂತೆ ಅಲ್ಲಿ ಜನ ಸೇರಿದ್ದರು. ಇಷ್ಟರಿಂದಲೇ ಅರ್ಥ ಮಾಡಿಕೊಂಡಿದ್ದಳು ರೋಹಿಣಿ. ಸಾಹಿತ್ಯದಲ್ಲಿ ಆಸಕ್ತಿ ಇದ್ದು ಅಲ್ಲಿಗೆ ಬಂದವರು ಬೆರಳೆಣಿಕೆಯಷ್ಟು ಮಂದಿ ಇರಬಹುದು. ಇವಳ ಕವನವನ್ನು ಉದ್ಧರಿಸುವಷ್ಟು ಚಂದ್ರು ರಸಿಕನಾಗಿದ್ದರೆ ಅದಕ್ಕೆ ಇವಳ ಮೇಲಿದ್ದ ಆಸಕ್ತಿ ಕಾರಣವೇ ಹೊರತು ಇವಳು ಬರೆದದ್ದರ ಮೇಲಲ್ಲ. ಇದೆಲ್ಲಾ ಮೊದಲೇ ಯಾಕೆ ಅರ್ಥವಾಗಲಿಲ್ಲ? ಅರ್ಥವಾಗಲಿಲ್ಲ, ಅಷ್ಟೇ...

ಬರೆಯಬೇಕೆನ್ನುವ ಒತ್ತಡದ ಹಿಂದೆ ಆ ಬರವಣಿಗೆ ಸಾಹಿತ್ಯಾಸಕ್ತರ ಕಣ್ಣಿಗೆ ಬಿದ್ದು ಗುರ್ತಿಸಿಕೊಳ್ಳಬೇಕೆನ್ನುವ ಚಪಲವೂ ಇರುತ್ತದೆಯೆಂದು ಅರ್ಥ ಮಾಡಿಕೊಳ್ಳುವಷ್ಟು ಮಾಗಿದ್ದಳು ರೋಹಿಣಿ. ಕೇವಲ ಸ್ವಸಂತೋಷಕ್ಕೆ ಬರೆದುಕೊಳ್ಳುತ್ತೇನೆ ಎನ್ನುವವರು ಎಷ್ಟು ಜನ ಇದ್ದಾರು? ಆಯ್ತು, ಸ್ವಸಂತೋಷಕ್ಕೆ ಬರೆದುಕೊಳ್ಳುತ್ತೇನೆಂದರೂ ತನ್ನ ಬರವಣಿಗೆಯ ಕುರಿತು ಆಕ್ಷೇಪ ಇರುವ ಚಂದ್ರುವಿನ ಎದುರು ಪುಸ್ತಕ ಹಿಡಿಯಲು ಏನೋ ಹೇನಾಯ. ಇಂತಾ ಪರಿಸ್ಥಿತಿಯಲ್ಲಿ ಬರೆಯಬೇಕೆಂಬ ಹುಮ್ಮಸ್ಸು ಪುಟಿಯುವುದಾದರೂ ಹೇಗೆ? ಕೋಗಿಲೆಯ ಕತ್ತು ಅದುಮಿ ಹಾಡು ಎಂದರೆ ಸ್ವರ ಹೊರಟೀತೇ? ಸ್ವಂತ ತಾಯಿಯ ಹತ್ತಿರ ಇದನ್ನೆಲ್ಲಾ ಹಂಚಿಕೊಳ್ಳುತ್ತೇನೆಂದರೂ ತನ್ನ ತೊಳಲಾಟ ಅಮ್ಮನಿಗೆ ಅರ್ಥವಾಗುವುದು ಕಷ್ಟ. ಹಾಗೆ ಅರ್ಥಮಾಡಿಕೊಳ್ಳಲು ಒಂದು ಹಿನ್ನೆಲೆ ಇರಬೇಕು. ಬರವಣಿಗೆಯ ಕುರಿತಾದ ಆಸಕ್ತಿ, ಗೌರವ ಇರಬೇಕು. 'ಸಂಸಾರಕ್ಕಿಂತಾ ನಿನ್ನ ಕತೆ, ಕವನ